## ಇಲ್ಲಿಯವರೆಗೆ



ರಾಜಕೋಟದಲ್ಲಿದ್ದಾಗ ಹರಿಲಾಲನ ಸೋದರ ಸಂಬಂಧಿ ಬಲಿ ಬಹನ್ ಹರಿಲಾಲನೊಂದಿಗೆ ಅನುಚಿತವಾಗಿ ವರ್ತಿಸಿದ್ದು ಇನ್ನೂ ಹರಿಲಾಲನ ಮನಸ್ಸಿನಲ್ಲಿ ಹಸಿರಾಗಿಯೇ ಇದ್ದು ಅದನ್ನು ನೆನೆಸಿಕೊಂಡರೆ ವ್ಯಗ್ರನಾಗುತ್ತಿದ್ದ. ಆಶ್ರಮದಲ್ಲಿ ತನ್ನ ಮಕ್ಕಳಿಗೆ ಸಿಗುವ ಶಿಕ್ಷಣದ ಬಗ್ಗೆಯೂ ಹರಿಲಾಲನಿಗೆ ಅಸಮಾಧಾನವಿತ್ತು. ಹಿರಿಯ ಮಗನನ್ನು ವೈದ್ಯನನ್ನಾಗಿ ಮಾಡಬೇಕು ಎಂಬುದು ಹರಿಲಾಲನ ಬಯಕೆಯಾಗಿತ್ತು.

ಈ ಮಧ್ಯೆ ಹರಿಲಾಲ ಪ್ರತಿನಿತ್ಯ ಮದ್ಯದ ಬಾಟಲಿಯ ಮೊರೆಹೋಗುತ್ತಿದ್ದ. ಒಂದು ರೀತಿಯ ಸುರೆಯ ದಾಸಾನುದಾಸನಾಗಿದ್ದ. ಗೋದರೇಜ್ ಸೇಠ್‌ರಿಗೆ ಹರಿಲಾಲನ ಮದ್ಯವ್ಯಸನದ ಬಗ್ಗೆ ಅರಿವಿತ್ತು. ಒಮ್ಮೆ ಕಶ್ಮೀರಿ ಹೋಟೆಲ್‌ನಲ್ಲಿ ತಂಗಿದ್ದ ಹರಿಲಾಲನ ಹೋಟೆಲ್ ರೂಮಿಗೆ ಗೋದರೇಜ್ ಸೇಠ್ ಹೋದಾಗ ಇಡೀ ರೂಮ್ ಅಸ್ತವ್ಯಸ್ತವಾಗಿದ್ದಲ್ಲದೆ ಮದ್ಯದ ಬಾಟಲಿ ಅಲ್ಲಲ್ಲಿ ಬಿದ್ದಿರುವುದನ್ನು ಗಮನಿಸುತ್ತಾನೆ. ಬಳಿಕ ಹರಿಲಾಲ ಆ ಕೆಲಸವನ್ನೂ ತ್ಯಜಿಸುತ್ತಾನೆ.

ಹರಿಲಾಲನನ್ನು ಕ್ರೋಧ ಮತ್ತು ಹತಾಶೆ ನಾಲ್ಕೂ ಕಡೆಗಳಿಂದ ಆವರಿಸಸುತ್ತದೆ. ಈಗ ಮತ್ತೊಮ್ಮೆ ಬಾಪೂ ಅವರ ಬಗ್ಗೆ ಅತೀವ ಆಕ್ರೋಶ ತಾಳುವ ಸಮಯ ಎದುರಾಗುತ್ತದೆ, ಬಾಪೂ ಒಂದು ಕಡೆ ತನ್ನ ಮಕ್ಕಳ ಬಗ್ಗೆ ತನ್ನ ಹಕ್ಕನ್ನು ಒಪ್ಪಿಕೊಳ್ಳುತ್ತಿದ್ದಾರೆ, ಆದರೆ ತನಗೆ ಇಷ್ಟವಾದುದನ್ನು ಕೈಗೊಳ್ಳುವ ತೀರ್ಮಾನ ತೆಗೆದುಕೊಳ್ಳುವಲ್ಲಿ ತನಗೆ ಸಹಾಯ ಮಾಡುವುದಕ್ಕೆ ಪ್ರತಿಯಾಗಿ ಅಡ್ಡಿಯಾಗುತ್ತಿದ್ದಾರೆ ಎಂದು ಅವನಿಗೆ ಅನ್ನಿಸತೊಡಗುತ್ತದೆ.

ಬಾಪೂ ತನಗೆ ಹಾಗೂ ತನ್ನ ಮನೆಯವರಿಗೆ ಅನ್ಯಾಯ ಮಾಡುತ್ತಿರುವುದಾಗಿ ಹರಿಲಾಲ 'ಹಮಾರಿ ಬಗಾವತ್' (ನಮ್ಮ ಬಂಡಾಯ) ಶೀರ್ಷಿಕೆಯ ಅಡಿಯಲ್ಲಿ ಒಂದು ಲೇಖನಮಾಲೆಯನ್ನು ಪ್ರಕಟಿಸಲು ಯೋಚಿಸಿ ಬಾಪೂ ಸ್ವತಃ ಯಾವ ರೀತಿಯಲ್ಲಿ ತಮ್ಮ ಧರ್ಮದಿಂದ ಚ್ಯುತರಾಗಿದ್ದಾರೆ ಎಂಬ ಬಗ್ಗೆ ಆ ಲೇಖನದಲ್ಲಿ ಬರೆದು ಮನಸ್ಸಿನ ದುಃಖವನ್ನು ಹೊರಗೆ ಹಾಕುತ್ತಾನೆ. ಈಲೇಖನಮಾಲೆಯನ್ನು ಆಗಿನ ಪ್ರಮುಖ ಗುಜರಾತಿನ ವರ್ತಮಾನ ಪತ್ರಿಕೆ 'ಹಿಂದೂಸ್ತಾನ್ ಪ್ರಜಾಮಿತ್ರ' ದಲ್ಲಿ ಪ್ರಕಟಣೆಗಾಗಿ ಕಳುಹಿಸುತ್ತಾನೆ. ಆಫ್ರಿಕಾದಿಂದ ಮರಳಿ ಬಂದ ನಂತರ ಬಾಪೂ ಅವರು ಮನೆತನದ ಹಿರಿಯರಿಂದ ಸಂಪಾದಿಸಿದ ಆಸ್ತಿಯ ತಮ್ಮ ಹಕ್ಕನ್ನು ತ್ಯಜಿಸುತ್ತಾರೆ. ತಮ್ಮ ಸಹೋದರರ ಪುತ್ರ ಶಾಮಲದಾಸ ಆಸ್ತಿಯ ಉಸ್ತುವಾರಿ ವಹಿಸುತ್ತಾನೆ. ಶಾಮಲದಾಸರೊಡನೆ ಮಾತನಾಡುವ ಸಲುವಾಗಿ ಹರಿಲಾಲ ಮುಂಬಯಿಯಿಂದ ರಾಜಕೋಟಕ್ಕೆ ಬರುತ್ತಾನೆ.

ಇಬ್ಬರು ಮಿತ್ರರು ಅವನು ಎಚ್ಚರಗೊಳ್ಳುವುದನ್ನು ನಿರೀಕ್ಷಿಸುತ್ತಿದ್ದರು.

'ಹರಿಲಾಲ್', ನೀನು ತುಂಬಾ ದಿನಗಳಿಂದ ವಿಶ್ರಾಂತಿಯನ್ನು ಪಡೆದಿಲ್ಲವೆಂದು ತೋರುತ್ತದೆ. ನಮ್ಮ ಜೊತೆಯಲ್ಲಿ ಬಾ, ಇಂದು ನಾಜನೀನಳ ಸಂಗೀತ ಕಛೇರಿಯಲ್ಲಿ ಮೈಮರೆಯೋಣ. ನಿನ್ನಂಥ ಗುಣವಂತನನ್ನು ಭೇಟಿಯಾಗಿ ಅವಳಿಗೆ ಖುಷಿಯಾಗುವುದು' ಒಬ್ಬ ಹರಿಲಾಲನಿಗೆ ಆಹ್ವಾನವನ್ನು ಕೊಟ್ಟ.

ಹರಿಲಾಲನ ಅಂಗಾಂಗಗಳು ಕಂಪಿಸಿದವು. ಹಸಿವು, ಹತಾಶೆ, ರೋಷ, ಸಿಟ್ಟು ಮತ್ತು ಕಪಾಳಮೋಕ್ಷದಿಂದಾದ ಅವಮಾನ ಎಲ್ಲವೂ ಮಾಯವಾದವು. ಅವನು ಎದ್ದು ನಿಂತ.

* * *

ಆದರೆ ಹರಿಲಾಲನಿಗೆ ಇದರಿಂದ ಮನಸ್ಸಿಗೆ ಸಮಾಧಾನ ಸಿಗುತ್ತಿರಲಿಲ್ಲ. ಅವನ ಕಣ್ಣುಗಳೆದುರಿನಿಂದ ಮನುವಿನ ರೋದನ ಮರೆಯಾಗುತ್ತಿರಲಿಲ್ಲ. ಮದ್ಯದ ಅಮಲಿನಲ್ಲಿಯೂ ಅವನಿಗೆ ಮನು ಭಯದಿಂದ ಚೀರಿದ್ದು ಮರೆಯಲಾಗುತ್ತಿರಲಿಲ್ಲ. ಬಲಿ ಬಹನಳೊಂದಿಗೆ ಅವನು ವರ್ತಿಸಿದ್ದ ರೀತಿ ಈಗಲೂ ಅವನನ್ನು ಯೋಚಿಸಲು ವಿವಶಗೊಳಿಸುತ್ತಿತ್ತು. ಗುಲಾಬಳ ಸಾವಿನ ನಂತರ ಬಲಿ ಬಹನಳೇ ಮನುವಿನ ತಾಯಿಯಾಗಿದ್ದಳು. ಮನುವಿಗೆ ಈ ಚಿಕ್ಕಮ್ಮ ಸ್ವಂತ ತಾಯಿಯಂತಿದ್ದಳು ಎಂಬುದನ್ನು ಅವನು ಕೇಳಿದ್ದ. ಅಮಲು ಇಳಿದ ನಂತರ ಇವೆಲ್ಲವೂ ಹರಿಲಾಲನನ್ನು ವ್ಯಗ್ರಗೊಳಿಸುತ್ತಿದ್ದವು. ತನ್ನ ಪರಿಸ್ಥಿತಿಯನ್ನು ಬಲಿ ಬಹನ್ ಅಥವಾ ಮನು, ಬಾ ಮತ್ತು ಬಾಪೂ ಅವರಿಗೆ ತಿಳಿಸಿರಬಹುದು; ಈ ಖಿನ್ನತೆಗೊಳಗಾಗಿ ಹರಿಲಾಲ ಕೆಲವು ದಿನಗಳು ಕಳೆದ ನಂತರ ಬಾಪೂ ಅವರಿಗೆ ಪತ್ರವೊಂದನ್ನು ಬರೆದ.

ಹರಿಲಾಲ ಬಾಪೂ ಅವರಿಗೆ ಪತ್ರವನ್ನು ಬರೆದ ಸಂದರ್ಭ, ಸಂತಾಪದ ಸಮಯವಾಗಿರಲಿಲ್ಲ. ನಿಜಾಮಿಯಾ ಹೊಟೇಲ್‌ನಲ್ಲಿ ಈಗ ಮದ್ಯಕ್ಕೆ ಕೊರತೆಯಿರಲಿಲ್ಲ. ಬಾಪೂ ಅವರಿಗೆ ಪತ್ರ ಬರೆಯುವಾಗ ಹರಿಲಾಲ ಮನಸಾರೆ ಕುಡಿದಿದ್ದ. ಅವನ ಕೈಯಲ್ಲಿದ್ದ ಲೇಖನಿ ಸಹ ಕಂಪಿಸುತ್ತಿತ್ತು. ಬೆರಳುಗಳ ಹಿಡಿತ ಸಡಿಲಗೊಳ್ಳುತ್ತಿತ್ತು. ಹಾಳೆಯಲ್ಲಿ ಮೂಡುವ ಶಬ್ದಗಳು ಅತ್ತಇತ್ತ ಹೊರಳುತ್ತಿದ್ದವು. ಯೋಚನೆಗೆ ನಿರ್ದಿಷ್ಟ ಕೊಂಡಿಯಿರಲಿಲ್ಲ, ಹೇಗೋ ಬರೆದ ಪತ್ರವನ್ನು ತೆಗೆದುಕೊಂಡು ಹೋಗಿ ಅಂಚೆ ಪೆಟ್ಟಿಗೆಗೆ ಹಾಕಿದ.

ರಾಜಕೋಟದಲ್ಲಿ ಘಟಿಸಿದ ಘಟನೆಯ ಬಗ್ಗೆ ಈ ಮೊದಲೇ ಮನು ಪತ್ರ ಬರೆದು ತಿಳಿಸಿದ್ದಳು. ಇದನ್ನೆಲ್ಲಾ ಓದಿ ಬಾಪೂ ತುಂಬಾ ಖಿನ್ನರಾಗಿದ್ದರು. ಅವರು ಹರಿಲಾಲನ ವರ್ತಮಾನದ ಬಗ್ಗೆ ಕಲ್ಪಿಸಿಕೊಂಡು ವ್ಯಗ್ರರಾಗಿದ್ದರು. ಇಡೀ ದೇಶದಲ್ಲಿ ರಾಜಕೀಯ ಕೋಲಾಹಲ ವ್ಯಾಪಿಸಿತ್ತು. ಬಾಪೂ ಅವರು ಬೆಳಿಗ್ಗೆಯಿಂದ ತಡರಾತ್ರಿಯವರೆಗೆ ಕೆಲಸದಲ್ಲಿ ಮಗ್ನರಾಗಿರುತ್ತಿದ್ದರು. ದೇಶದ ಏಕತೆ ಈಗ ಅತೀತಕ್ಕೆ ಹೋಗಿದೆ ಎಂದು ತೋರುತ್ತಿತ್ತು. ಹಿಂದೂಮುಸ್ಲಿಮ್ ಸಂಘರ್ಷದಿಂದಾಗಿ ವಾತಾವರಣ ನಾಜೂಕು ಸ್ಥಿತಿಯಲ್ಲಿತ್ತು. ಅತ್ತ, ಸವರ್ಣೀಯ ಹಿಂದೂಗಳು ಮತ್ತು ಅಸ್ಪೃಶ್ಯಜಾತಿಗಳ ನಡುವೆ ಗೋಡೆಯೊಂದು ನಿಂತಂತಾಗಿತ್ತು. ಸಿವಿಲ್ ಡಿಸೊಬಿಡಿಯನ್ಸ್ ಮತ್ತು ದುಂಡುಮೇಜಿನ ಪರಿಷದ್‌ಗಳು ನಡೆದಿದ್ದವು. ಸತ್ಯಾಗ್ರಹ, ಬಂಧನಗಳು, ಲಾಠಿಚಾರ್ಜ್ ಮತ್ತು ಗೋಲಿಬಾರ್ ಹಾಗೂ ಜೈಲುವಾಸ ಈ ವಾತಾವರಣದಿಂದಾಗಿ ಎಲ್ಲೆಡೆ ಪರಿಸ್ಥಿತಿ ಕಾವೇರಿತ್ತು. ಬ್ರಿಟಿಷ್ ಸರ್ಕಾರ ಕಾಂಗ್ರೆಸ್‌ನ ಬಹುತೇಕ ಮುಖಂಡರನ್ನು ಹಿಡಿದಿಟ್ಟು ಕೊಂಡಿತ್ತು. ಹರಿಲಾಲನ ಪತ್ರ ಬಾಪೂ ಅವರ ಕೈಸೇರಿದಾಗ ಅವರು ಜೈಲಿನಲ್ಲಿದ್ದರು.

ತಡ ರಾತ್ರಿಯವರೆಗೆ ಭೇಟಿ ಮಾಡಲು ಬಂದವರೊಂದಿಗೆ ಮಾತುಕತೆಯನ್ನು ನಡೆಸಿ, ಅಗತ್ಯ ಪತ್ರಗಳು ಮತ್ತು ಲೇಖನಗಳನ್ನು ಬರೆಯಿಸಿದ ನಂತರ ಬಾಪೂ ಅವರು ತಮ್ಮ ಹಾಸಿಗೆಯ ಬಳಿಗೆ ಹೋದಾಗ ನಡುರಾತ್ರಿ ಕಳೆದಿತ್ತು. ತಲೆದಿಂಬಿನ ಬಳಿ ಇಡಲಾಗಿದ್ದ ಹರಿಲಾಲನ ಪತ್ರ ಅವರನ್ನು ನಿರೀಕ್ಷಿಸುತ್ತಿತ್ತು. ಹರಿಲಾಲನ ಕೈಬರಹವನ್ನು ನೋಡಿ ಬಾಪೂ ಅವರ ದಣಿದ ಕಣ್ಣುಗಳಲ್ಲಿ ಒಂದು ಕ್ಷಣ ಹೊಳಪು ಮೂಡಿತು. ಅವರು ಮೆಲ್ಲನೆ ಪತ್ರವನ್ನು ತೆರೆದರು. ಒಂದೇ ಉಸುರಿಗೆ ಪತ್ರವನ್ನೋದಿ, ಕಣ್ಣುಗಳನ್ನು ಮುಚ್ಚಿಕೊಂಡರು. ಪತ್ರದ ಬರವಣಿಗೆ ಮತ್ತು ಪತ್ರದ ಅವಸ್ಥೆ ಎರಡೂ ಸಹ ಹರಿಲಾಲನ ಪರಿಸ್ಥಿತಿಯನ್ನು ಬಿಂಬಿಸುತ್ತಿದ್ದವು. ಪತ್ರದ ಕೊನೆಯಲ್ಲಿ ಹರಿಲಾಲ ತನ್ನ ರುಜು ಹಾಕುವುದನ್ನು ಮರೆತಿದ್ದ ಅಥವಾ ಅವನು ರುಜು ಮಾಡುವ ಸ್ಥಿತಿಯಲ್ಲಿ ಇರಲಿಲ್ಲವೇನೋ... ಬಾಪೂ ಅವರ ತುಟಿಗಳು ಕಂಪಿಸಿದವು. ಬಾಪೂ